ಸಭೆ ಮುಗಿಸಿಕೊಂಡು ಇಬ್ಬರೂ ಜಯನಗರಕ್ಕೆ ಹೋಗಿ ನಿರಂಜನರನ್ನು ಕಂಡುಬಂದೆವು (1988 ಜೂನ್ 30). ಅವರು ನಮ್ಮ ಕುಟುಂಬದ ಒಬ್ಬ ಹಿರಿಯರಂತೆಯೇ ಮನಸ್ಸಿನಲ್ಲಿ ತುಂಬಿದ್ದರು.

ಈ ಮಧ್ಯೆ ಅನುಪಮಾ ನಿರಂಜನರು ಅಸು ನೀಗಿದ ಸುದ್ದಿ (1991 ಫೆಬ್ರುವರಿ 15) ತಿಳಿದು ಆಘಾತವಾಗಿತ್ತು. ನಿರಂಜನರು ಆ ಆಘಾತವನ್ನು ಸಹಿಸಿದ ಬಗ್ಗೆ ಯೋಚಿಸಲೂ ಅಸಮರ್ಥನಾಗಿದ್ದೆ. ಅದರ ಮರುವರ್ಷವೇ ನಿರಂಜನರೂ ನಿರಂಜನಧಾಮಕ್ಕೆ ತೆರಳಿದರು (1992 ಮಾರ್ಚ್ 12). 20-21 ವರ್ಷ ಪಾರ್ಶ್ವವಾಯುವಿನಿಂದ ಬಳಲಿದರೂ ತಮ್ಮ ಸೈದ್ಧಾಂತಿಕ ಚಿಂತನ, ಬೌದ್ಧಿಕ ಚಟುವಟಿಕೆ ಹಾಗೂ ಬರವಣಿಗೆಯನ್ನು ನಿರಾತಂಕವಾಗಿ ನಡೆಸಿಕೊಂಡು ಬಂದಿದ್ದರು.

## 6

ನನ್ನ ಗೆಳೆಯ ಸುಮತೀಂದ್ರ ನಾಡಿಗನಿಗೆ ಪುತ್ತೂರಿನಲ್ಲಿ 'ನಿರಂಜನ ಪ್ರಶಸ್ತಿ' ಕೊಡಲಿರುವ ಸುದ್ದಿ (2006 ಜುಲೈ 28) ಓದಿದೆ. ಅದರ ಬೆನ್ನಲ್ಲೇ, ಅವತ್ತು ನಾಡಿಗನ ಬಗ್ಗೆ ಅಭಿನಂದನ ಭಾಷಣ ನಾನೇ ಮಾಡಬೇಕೆಂದು ಕೋರಿ ಪುತ್ತೂರಿನ ಮಿತ್ರರು ಫೋನಿಸಿದರು. ನಾನು 2006 ಸೆಪ್ಟಂಬರ್ 6ರ ಬೆಳಗ್ಗೆನೇ ಪುತ್ತೂರು ತಲುಪಿದೆ. ಅಲ್ಲಿಯ ವಿವೇಕಾನಂದ ಕಾಲೇಜಿನವರು ಪ್ರತಿ ವರ್ಷ ಒಬ್ಬ ಪ್ರತಿಷ್ಠಿತ ಸಾಹಿತಿಗೆ 'ನಿರಂಜನ ಪ್ರಶಸ್ತಿ' ಕೊಡುವ ಮೂಲಕ ನಿರಂಜನರನ್ನು, ತನ್ಮೂಲಕ ಅವರ ನೆನಪನ್ನು ನಿರಂತರವಾಗಿಸುವ ಸ್ತುತ್ಯ ಕಾರ್ಯವನ್ನು ಮಾಡುತ್ತಿದ್ದಾರೆ. ಧಾರವಾಡದಲ್ಲಿದ್ದ ನಿರಂಜನರ ಬದುಕಿನ ಕೆಲವು ಪ್ರಸಂಗಗಳನ್ನು ಸ್ಮರಿಸುತ್ತ, ನಾಡಿಗನ ಸಾಹಿತ್ಯಿಕ ಕೊಡುಗೆಯನ್ನು ಅಲ್ಲಿ ವಿವರಿಸಿದೆ. ವಿವೇಕಾನಂದ ಕಾಲೇಜಿನ ಪ್ರಿನ್ಸಿಪಾಲ್ ಡಾ. ಶ್ರೀಧರ್ ಭಟ್, ಕನ್ನಡ ವಿಭಾಗದ ಡಾ. ಶ್ರೀಧರ್ ಎಚ್. ಜಿ. ಮುಂತಾದವರು ದ.ಕ. ಜಿಲ್ಲೆಯಲ್ಲಿ ನಿರಂಜನರನ್ನು ಉಳಿಸಲು ಯತ್ನಿಸುತ್ತಿದ್ದುದು ಸ್ತುತ್ಯ ಕಾರ್ಯವೆನಿಸಿತು.

ಒಂದು ಸಂಜೆ (2010 ಅಕ್ಟೋಬರ್ 23) ನಿರಂಜನರ ಹಿರಿಯ ಮಗಳು ತೇಜಸ್ವಿನಿ ನಿರಂಜನಳ ಫೋನ್ ಕರೆ ಬಂತು. 'ನಾಳೆ ಬೆಳಗ್ಗೆ ನಿಮ್ಮ ಭೆಟ್ಟಿಗೆ ಬರುವೆ' ಎಂದಳು. ಮಗಳು ಮನೆಗೆ ಮರಳುತ್ತಿರುವಂಥ ಸಂತೋಷದ ಗಳಿಗೆ. ಅವಳು ಹೈದರಾಬಾದ್‌ದಲ್ಲಿ ಕಲಿಯಲು ಉಳಿದಿದ್ದು, ನಂತರ ಬಹುಶಃ ಅಲ್ಲಿಯೇ ಯಾವುದೋ ಕೆಲಸ ಮಾಡುತ್ತಿದ್ದುದು ಕೇಳಿದ್ದೆ. ಮರುದಿನ (2010 ಅಕ್ಟೋಬರ್ 24) ಬೆಳಗ್ಗೆ 10.30ಕ್ಕೆ ತನ್ನ ಕಾರಿನಲ್ಲಿ ನೇರವಾಗಿ ನಮ್ಮ ಮನೆಗೆ ಬಂದಳು. ನಾಲ್ಕು ತಾಸು ನಮ್ಮ ಮನೆಯಲ್ಲಿದ್ದಳು. ಅನುಪಮಾ ಮತ್ತು ನಿರಂಜನರು ಧಾರವಾಡದಲ್ಲಿ ವಾಸವಾಗಿದ್ದ ಕಾಲದಲ್ಲಿ ಇಲ್ಲಿದ್ದ ಜನರು, ಅವರ ನಡವಳಿಕೆ, ಆಗಿನ ಸಂಸ್ಕೃತಿ, ಸಾಹಿತ್ಯಿಕ ವಾತಾವರಣ, ಆಗ ಇಲ್ಲಿದ್ದ ಪತ್ರಿಕೆಗಳು ಮುಂತಾದ ಅನೇಕ ವಿವರಗಳನ್ನು ಕೇಳಿ, ರೆಕಾರ್ಡ್ ಮಾಡಿಕೊಂಡಳು. ಅಪ್ಪ ಅಮ್ಮ ಇದ್ದ ಮನೆ, ಆಸ್ಪತ್ರೆ ಮಾಡಿದ್ದ ಸ್ಥಳದ ಬಗ್ಗೆ ಕೇಳಿದಳು. ಊಟದ ನಂತರ ಕರೆದುಕೊಂಡು ಹೋದೆ. ದಾರಿಯಲ್ಲಿ ಒಂದು ಕ್ಷಣ ನಿಂತು, ಹೊರಗಿನಿಂದಲೇ ಈಗ ದೇವಸ್ಥಾನವಾಗಿರುವ ದೈವಜ್ಞ ಭವನವನ್ನು ನೋಡಿ ಮೌನವಾದಳು. ಏನು ಯೋಚಿಸಿದಳೋ ಗೊತ್ತಿಲ್ಲ. ದೇವರನ್ನು ಒಪ್ಪದ ಅಪ್ಪ ಅಮ್ಮ ಇದ್ದ ಮನೆಯೇ ದೇವರಮನೆಯಾಗಿದೆ ಅಂದುಕೊಂಡಳೇನೊ. ಮುಂದೆ ಹತ್ತಿರದಲ್ಲಿಯೇ ಇದ್ದ, ಆಸ್ಪತ್ರೆಯಾಗಿದ್ದ ಹಳ್ಳಿಕೇರಿ ಚಾಳಿನ ಮನೆ ತೋರಿಸಿದೆ. ಈಗ ಆ ಮನೆಯಲ್ಲಿ ಜನ ತುಂಬಿದ್ದಾರೆ. ಪೂರ್ವ ಕಾಲದ ಶ್ರೀಮಂತ ಕುಟುಂಬ ತುಂಬಿದಂಥ ಮನೆ. ತೇಜಸ್ವಿನಿ ಮೌನವಾಗಿಯೇ ಎಲ್ಲ ಗಮನಿಸಿದಳು. ನಂತರ ಅವಳನ್ನು ಶ್ರೀನಗರದಲ್ಲಿದ್ದ ಅವಳ ಪರಿಚಯದ ಚೈತ್ರಾ ಸುಧಾಕರ (ವಿ.ಜಿ. ಭಟ್ಟರ ಮಗಳು) ಅವರ ಮನೆಗೆ ಬಿಟ್ಟೆ.

ನಿರಂಜನರು ಕೇವಲ ಕರಾವಳಿ ಭಾಗದವರಲ್ಲ, ಅವರು ಸಮಗ್ರ ಕನ್ನಡದ ಅತ್ಯಂತ ಸಮರ್ಥ ಪ್ರಗತಿಶೀಲ ಲೇಖಕರಾಗಿ ಕನ್ನಡವನ್ನು ಪೋಷಿಸಿದ್ದಾರೆ, ವರ್ಧಿಸಿದ್ದಾರೆ. ಕನ್ನಡಕ್ಕೆ ಬದುಕು, ಬರಹದ ಎರಡೂ ಮಗ್ಗುಲುಗಳಲ್ಲಿ, ಪ್ರಾಮಾಣಿಕ ಪ್ರಗತಿಯ ಧ್ವನಿ ಸಾಹಿತ್ಯ ಗಗನದಲ್ಲಿ ಮೊಳಗುವಂತೆ ಮಾಡಿದ್ದಾರೆ. ನಿರಂಜನರು ಕೇವಲ ಕರ್ನಾಟಕದ ಕನ್ನಡ ಲೇಖಕರಲ್ಲ, ಅವರು ಸಮಸ್ತ ಭಾರತೀಯ ಸಮಾಜದ ನೋವಿನ ಚಿತ್ರಣ ಮಾಡಿದ ಲೇಖಕರು. ಒಂದು ರೀತಿಯಲ್ಲಿ ಅವರು ಕನ್ನಡದ ಪ್ರೇಮ್‌ಚಂದ್. ಈಗಲೂ ನಿರಂಜನರನ್ನು ನೆನೆಸುವಲ್ಲಿ ಕನ್ನಡದ ಕಳಕಳಿ ಎಲ್ಲೋ ತಪ್ಪುತ್ತಿದೆ. ಇದನ್ನು ಯಾರು ಸರಿಪಡಿಸಬೇಕು?

●